dd-#17
T·P-2

(1)

R No KRNN 12 ಶ್ರೀ 13-12-1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★★★★★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ (3 ಪೈಸೆ

ಕರ್ನಾಟಕ ರಾಜ್ಯ ಅರಣ್ಯ ಇಲಾಖೆ – ಹುಣಸೂರು ವಿಭಾಗ, ಹುಣಸೂರು

★★

ನಂ. ಐಎಡಿ–22–146/74-75. ಹುಣಸೂರು, ತಾ|| 3ನೇ ಡಿಸೆಂಬರ್ 1974

ಟೆಂಡರ್ ಪ್ರಕಟಣೆ

1975–76 ನೆಯ ಸಾಲಿಗೆ ಇಲಾಖೆಯ ಅನೆಗಳಿಗೆ ಆಹಾರ ಕೊಡಲು ಬೆಕಾಗಿರುವ ಈ ಕೆಳಗೆ ಕಂಡ ಪದಾರ್ಥಗಳನ್ನು ಸರಬರಾಜು ಮಾಡಲು ಈ ಕೆಳಗೆ ಸಹಿ ಮಾಡಿರುವವರಿಂದ ಸೋಮವಾರ 6 ನೇ ಜನವರಿ 1974 ರ ಮಧ್ಯಾಹ್ನ 3 ಗಂಟೆ ವರೆಗೆ ಮೊಹರಂದ ಟೆಂಡರ್‌ಗಳು ಸ್ವೀಕರಿಸಲ್ಪಡುವುವು. ಒಪ್ಪಂದವನ್ನು ಬರೆಸಿಕೊಟ್ಟ ತಾರೀಖಿನಿಂದ 31 ನೇ ಮಾರ್ಚ್ 1976 ರ ವರೆಗೆ ಅಥವಾ ಬರುವ ವರ್ಷದ ಕಾಂಟ್ರಾಕ್ಟು ಪೂರ್ತಿ ಆಗುವ ವರೆಗೆ ಕಾಂಟ್ರಾಕ್ಟು ಜಾರಿಯಲ್ಲಿ ಇರುವುದು. 1975–76 ನೇ ಸಾಲಿಗೆ ಬೇಕಾದ ಅಂದಾಜು ಪ್ರಮಾಣ (ಹೆಚ್ಚು ಕಡಿಮೆ) — 1 ರಾಗಿ – 1,10,000 ಕೆಜಿಗಳು. 2 ಹುರುಳಿ – 1,00,000 ಕೆಜಿಗಳು. 3 ಬೆಲ್ಲ – 10,000 ಕೆಜಿಗಳು 4 ಉಪ್ಪು – 5,000 ಕೆಜಿಗಳು 5 ಬೀಟ್ ನ್ ಅಕ್ಕಿ (ಅವಲಕ್ಕಿ) – 100 ಕೆಜಿಗಳು 6 ಉದ್ದು – 100 ಕೆಜಿಗಳು 7 ಈರುಳ್ಳಿ – 100 ಕೆಜಿಗಳು 8 ಮೆಂತೆ – 100 ಕೆಜಿಗಳು 9 ಪಮತ್ಥ ಬೇಯಿಸಿದ ಅಕ್ಕಿ – 100 ಕೆಜಿಗಳು 10 ಭತ್ತ (ಸಾಮಾನ್ಯವಾದ ರಖಮಿನದು) –1,000 ಕೆಜಿಗಳು 11 ಕಡಲೆ–100 ಗ್ರಾಮುಗಳು 12 ಹೆಸರು–100 ಕೆಜಿಗಳು 13 ಹುಣಿಸೆಹಣ್ಣು – 25ಕೆಜಿಗಳು 14 ಹರಳು ಎಣ್ಣೆ – 1,000 ಲೀಟರುಗಳು 15 ಬೇವಿನ ಎಣ್ಣೆ – 500 ಲೀಟರುಗಳು 16 ಕೊಬ್ಬರಿ ಎಣ್ಣೆ – 50 ಲೀಟರುಗಳು 17 ತೆಂಗಿನಕಾಯಿಗಳು – 500 ಸಂಖ್ಯೆಗಳು 18 ಭತ್ತದ ಹುಲ್ಲು (ಮೇವು) – 1,000 ಕೆಜಿಗಳು, ವಿವರವಾದ ಟೆಂಡರ್ ಪ್ರಕಟಣೆಯನ್ನು ಈ ಕಚೇರಿಯಿಂದ ಪಡೆಯಬಹುದು.

ಸಹಿ/– ಎ ಎಸ್. ಯೆಲ್ಲಪ್ಪ ರೆಡ್ಡಿ,
ವಿಭಾಗ ಅರಣ್ಯ ಅಧಿಕಾರಿಯವರು

ವುಡ್‌ಲಾಂಡ್ 13 12 74 ರಿಂದ
ಅವೋಘ ಆರಂಭ
ಅಪೂರ್ವ ಈಸ್ಟ್‌ಮನ್ ಕಲರ್ ಮಲಯಾಳಂ ಕಲಾಕೃತಿ
ಚ ಟ ಕಾ ರಿ
ಪಾತ್ರ — ಲಕ್ಷ್ಮೀ ಮೋಹನ್ ದಿನಕ್ಕೆ ಪ್ರದರ್ಶನಗಳು

ಮುಖ್ಯ ಮಂತ್ರಿ ಫೋರಾವೋ

ಒರಿಸ್ಸಾ ಮುಖ್ಯಮಂತ್ರಿ ಶ್ರೀಮತಿ ನಂದಿನ ಪಥಪತಿಯವರನ್ನು ಶಾಸನಸಭೆಯಲ್ಲಿ ಅವರ ಕೊಠಡಿಯಲ್ಲಿ ಕುಪಿತ ಮಹಿಳಾ ಉಪಾಧ್ಯಾಯರು ಅರ್ಧ ಗಂಟೆ ಘೇರಾವೋ ಮಾಡಿದ್ದರು

★

ಶಾಸನಸಭೆಯಲ್ಲಿ ಜೋಡುಗಳ ಜಿಗುಪ್ಸೆ

ಬೀಹಾರು ಶಾಸನಸಭೆಯಲ್ಲಿ ಅರ್ಥ ಮಂತ್ರಿ ಶ್ರೀ ದರೋಗ ಪ್ರಸಾದ್ ರವರು ತಮ್ಮ ಪಾರ್ಟಿಯ ಶ್ರೀ ವಿಶ್ವಕರ್ ಕವಿಯವರನ್ನು ಸಭೆಯ ಹೊರಗೆ ಮಲ್ಲಯುದ್ಧದ ಸವಾಲು ಹಾಕಿದರು – ವಿಧಾನ ಪರಿಷತ್ತಿನಲ್ಲಿ ಒಂದು ಮಸೂದೆ ಚರ್ಚೆಯಾಗುತ್ತಿದ್ದಾಗ ಕಮ್ಯುನಿಸ್ಟು ಸದಸ್ಯ ಶ್ರೀ ನಿರಂಜಿ ಪ್ರಸಾದರು ಸ್ವತಂತ್ರ ಸದಸ್ಯ ಶ್ರೀ ಪಾಂಡೆಯವರ ಕಡೆ ತಮ್ಮ ಜೋಡನ್ನು ಜಳುಪಿಸಲು ಶ್ರೀ ಪಾಂಡೆಯವರೂ ತಮ್ಮ ಜೋಡನ್ನು ಕಳಚಿ ಹಾಗೇ ಮಾಡಿದರು – ಇತರ ಸದಸ್ಯರು ಮಧ್ಯೆ ಬಂದು ಘರ್ಷಣೆಯನ್ನು ತಪ್ಪಿಸಿದರು.

★

ನಾಗಾಗಳಿಂದ ಭೂಮಿ ಆಕ್ರಮಣ

ಜೋರ್‌ಹಟ್– ಅಸ್ಸಾಮಿನ ದೊಸ್ಸೊ ಕಣಿವೆಯ ಬಹಳ ಭಾಗವನ್ನು 4000 ನಾಗಾಗಳು ಆಕ್ರಮಿಸಿ ಅನಧಿಕೃತವಾಗಿ ಜೋಪಡಿಗಳನ್ನು ನಿರ್ಮಿಸಿರುವರು – ಅಲ್ಲಿಯ ಅನೇಕ ಮರಗಳನ್ನು ಕೆಡವಿದ್ದಾರೆ.

★

ಬಂಗ್ಲಾದೇಶಕ್ಕೆ ಸಾಲ

ನವದೆಹಲಿ— ಬಂಗ್ಲಾದೇಶಕ್ಕೆ ಭಾರತವು ರೂ. 100 ಕೋಟಿ ಸಾಲ ಕೊಡಲು ನಿರ್ಧರಿಸಿರುವದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು.

ನಿರುದ್ಯೋಗಿಗಳು

ನವದೆಹಲಿ— ಉದ್ಯೋಗ ವಿನಿಮಯ ಸಂಸ್ಥೆಗಳ ರಿಜಿಸ್ಟರಿನಲ್ಲಿ ಸಪ್ಟಂಬರು 30 ರಂದು 56.39 ಲಕ್ಷ ಜನ ಕೆಲಸ ಬೇಕಾದವರು ಇದ್ದರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ಕನ್ನಡಕ್ಕೆ ಗಂಡಾಂತರ

ಮಹಾರಾಷ್ಟ್ರದಲ್ಲಿ ಕನ್ನಡ ಮಾಧ್ಯಮ ವಿದ್ಯಾಭ್ಯಾಸ ತಣ್ಣಗಾಗುವಂತಿದೆ; 75 ರ ವಿದ್ಯಾಭ್ಯಾಸ ವರ್ಷದಿಂದ ಜಾರಿಗೆ ತರಲಿರುವ ಹೊಸ ವಿದ್ಯಾಭ್ಯಾಸ ಸ್ಕೀಂನಲ್ಲಿ ಶಿಕ್ಷಣ ಮಾಧ್ಯಮಕ್ಕೆ ಗುಜರಾತಿ, ಉರ್ದು, ಹಿಂದಿ ಮತ್ತು ಇಂಗ್ಲೀಷು ಇಡಲಾಗಿದೆ; ಕನ್ನಡ ಬಿಡಲಾಗಿದೆ !

ಪುರಾಡಳಿತ ಪ್ರತಿಭಟನೆ

ಕಾರವಾರ— ಅಖಿಲ ಭಾರತ ವಿದ್ಯಾರ್ಥಿಗಳ ಪರಿಷತ್ತಿನ ಸ್ಥಳೀಯ ಶಾಖೆಯು ದೇಶದಲ್ಲಿನ ದುರಾಡಳಿತ ಪ್ರತಿಭಟಿಸಲೂ, ಬೀಹಾರು ಚಳುವಳಿಗೆ ಬೆಂಬಲ ನೀಡಲೂ ಸೋಮವಾರ ಮೆರವಣಿಗೆ ನಡೆಸಿತು.

●

ಎಸ್ ಸಿ ಸಹಕಾರ

ಬೆಂಗಳೂರು— ಅಕ್ರಮ ದಾಸ್ತಾನುಗಳನ್ನು ಹೊರಗೆ ಬರಿಸುವ ಕಾರ್ಯದಲ್ಲಿ ಕರ್ನಾಟಕ ಸರಕಾರ ಎಸ್‌ಸಿ ಯವರ ನೆರವನ್ನು ಪಡೆಯಲು ಯೋಜಿಸಿದೆ ಎಂದು ಯುವಜನ ಸೇವಾ ಸಚಿವ ಶ್ರೀ ಗುಂಡೂರಾಯರು ಪತ್ರಿಕೆಯವರಿಗೆ ತಿಳಿಸಿದರು.

ಅಪೆರಾ 12 12 74 ರಿಂದ
ಕತಿಕುತ್ತುಕಂದನ್
ಪಾತ್ರ – ಕೃಷ್ಣ, ವೆಣ್ಣಿರಾಡಿ ನಿರ್ಮಲ ಎಸ್.ವಿ ರಂಗರಾವ್ ಜಯಶ್ರೀ
ಅವೋಘ ತಮಿಳು ಚಿತ್ರ ಈಸ್ಟ್‌ಮನ್ ಕಲರ್

(2)

ಸತ್ಯ ಮತ್ತು ಅಹಿಂಸೆ

(ಮಹಾತ್ಮಾ ಗಾಂಧಿಯವರ ಸಂದೇಶ – ಲೇ : ಯು. ಎಸ್. ಮೋಹನರಾವ್)

ಅಹಿಂಸೆಯಿಂದ ಅಧಿಕಾರವನ್ನು ಪಡೆಯಲು ಅಥವಾ ಅಧಿಕಾರವನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಕ್ಕಿಲ್ಲ ಇದು ಅಹಿಂಸೆಯ ಧ್ಯೇಯವೂ ಅಲ್ಲ ಆದರೆ ಅಹಿಂಸೆಯಿಂದ ಇದಕ್ಕೂ ಹೆಚ್ಚಿನದನ್ನು ಸಾಧಿಸಬಹುದಾಗಿದೆ ಸರ್ಕಾರದ ಅಡಳಿತ ವ್ಯವಸ್ಥೆಯನ್ನು ವಹಿಸಿಕೊಳ್ಳದೆ, ಅಧಿಕಾರದಲ್ಲಿರುವವರಿಗೆ ಸನ್ಮಾರ್ಗವನ್ನು ತೋರಲು ಪರಿಣಾಮಕಾರಿಯಾದ ಹತೋಟಿಯನ್ನು ಪಡೆಯಲು ಅಹಿಂಸೆಯು ಒಂದು ಉತ್ತಮ ಸಾಧನವಾಗಿದೆ. ಇದೇ ಅಹಿಂಸೆಯಲ್ಲಿನ ಶ್ರೇಷ್ಠತೆಯಾಗಿದೆ.

ತಪ್ಪಿಸ್ಥರನ್ನು ಕಂಗೆಡಿಸುವುದು ಸತ್ಯಾಗ್ರಹಿಯ ಉದ್ದೇಶವಾಗಿರಬಾರದು. ನಾವು ಕೈಗೊಳ್ಳುವ ಕ್ರಮವು ಅವನ ಮನ ಮುಟ್ಟಬೇಕು ತಪ್ಪಿಸ್ಥರ ಮನಒಲಿಸಿ ಅವರನ್ನು ಪರಿವರ್ತಿಸುವುದೇ ಸತ್ಯಾಗ್ರಹಿಯ ಧ್ಯೇಯವಾಗಿರಬೇಕೆ ವಿನಹ ಅವರನ್ನು ಬೆದರಿಸುವುದಲ್ಲ ಸತ್ಯಾಗ್ರಹಿಯು ತನ್ನ ಕೆಲಸ ಕಾರ್ಯಗಳಲ್ಲಿ ಅಸ್ವಾಭಾವಿಕವಾದ ಕ್ರಮಗಳನ್ನು ಕೈಗೊಳ್ಳಬಾರದು ಸತ್ಯಾಗ್ರಹಿಯು ಸಾಧಾರಣವಾದ ಎಚ್ಚರಿಕೆಯಿಂದ ಸಹಜವಾಗಿ ವರ್ತಿಸಬೇಕು

ಸತ್ಯಾಗ್ರಹಿಯು ತಪ್ಪು ಮತ್ತು ತಪ್ಪಿಸ್ಥರ ನಡುವಣ ಅಂತರವನ್ನು ಎಂದೂ ಮರೆಯಬಾರದು ತಪ್ಪಿಸ್ಥರ ಬಗ್ಗೆ ದ್ವೇಷ ಸಾಧಿಸಬಾರದು ಸತ್ಯಾಗ್ರಹಿಯು ಕೆಡಕನ್ನು ಒಳಿತಿಂದಲೂ, ಸಿಟ್ಟನ್ನು ಪ್ರೀತಿಯಿಂದಲೂ, ಅಸತ್ಯವನ್ನು ಸತ್ಯದಿಂದಲೂ ಮತ್ತು ಹಿಂಸೆಯನ್ನು ಅಹಿಂಸೆಯಿಂದಲೂ ಜಯಿಸಲು ಪ್ರಯತ್ನಿಸಬೇಕು ವಿಶ್ವದಲ್ಲಿರುವ ಕೆಡಕನ್ನು ಅಸತ್ಯವನ್ನು ನಿರ್ಮೂಲಗೊಳಿಸಲು ಇದನ್ನು ಬಿಟ್ಟು ಅನ್ಯ ಮಾರ್ಗವಿಲ್ಲ

ಸತ್ಯಾಗ್ರಹವು ನಾವು ಕೈಗೊಳ್ಳಬಹುದಾದ ನೇರ ಕ್ರಮಗಳ ಪೈಕಿ ಒಂದು ಪ್ರಬಲ ಅಸ್ತ್ರವಾಗಿದೆ ಇತರ ಎಲ್ಲಾ ಕ್ರಮಗಳೂ ವಿಫಲವಾದಲ್ಲಿ ಮಾತ್ರ, ಸತ್ಯಾಗ್ರಹವನ್ನು ಆಚರಿಸಬೇಕು. ಆದ್ದರಿಂದ ಸತ್ಯಾಗ್ರಹಿಯು ಪದೇ ಪದೇ ಮೇಲಿನ ಅಧಿಕಾರಿಗಳನ್ನು ಭೇಟಿಯಾಗಿ ತನ್ನ ನಿಲುವನ್ನು ಸ್ಪಷ್ಟಪಡಿಸಿ, ಕಾರ್ಯ ಸಾಧಿಸಿಕೊಳ್ಳಲು ಪ್ರಯತ್ನಿಸಬೇಕು. ಸಾರ್ವಜನಿಕರ ಅಭಿಪ್ರಾಯವನ್ನು ಅರಿತುಕೊಂಡು ಅವರ ಬೆಂಬಲ ಪಡೆಯಬೇಕು ಸಾರ್ವಜನಿಕರಿಗೆ ತನ್ನ ನಿಲುವಿನ ಬಗ್ಗೆ ಮಾಹಿತಿ ನೀಡಬೇಕು ಅವರ ಮನ ಒಲಿಸಲು ಪ್ರಯತ್ನಿಸಬೇಕು ಈ ಎಲ್ಲ ಕ್ರಮಗಳೂ ವಿಫಲವಾದಲ್ಲಿ ಮಾತ್ರ, ಸತ್ಯಾಗ್ರಹವನ್ನು ಆಚರಿಸಬೇಕು. ಆದರೆ ಅಂತರಾತ್ಮದ ಕರೆಗೆ ಓಗೊಟ್ಟು ಯಾರೇ ಆಗಲೀ ಸತ್ಯಾಗ್ರಹವನ್ನು ಪ್ರಾರಂಭಿಸಿದಲ್ಲಿ ಅದರಿಂದ ವಿಮುಖರಾಗಲು ಸಾಧ್ಯವಿಲ್ಲ

ಸತ್ಯಾಗ್ರಹಿಯು ಕಾರಾಗೃಹ ವಾಸದ ಶಿಕ್ಷೆಯನ್ನು ಅನುಭವಿಸಲು ಒಪ್ಪಿಕೊಳ್ಳುವುದು. ಅಧಿಕಾರ ವರ್ಗದವರನ್ನು ಕಂಗೆಡಿಸುವುದಕ್ಕಲ್ಲ ತನ್ನ ನಿರ್ದೋಷವನ್ನು ಪ್ರದರ್ಶಿಸಿ ಅಧಿಕಾರ ವರ್ಗದವರನ್ನು ಪರಿವರ್ತಿಸುವ ಉದ್ದೇಶದಿಂದ ಆತನು ಪೆರೆ ಮನೆಗೆ ಹೋಗುತ್ತಾನೆ. ಬಂದಿಖಾನೆಗೆ ಹೋಗಲು ನಿಮಗೆ ನೈತಿಕ ಯೋಗ್ಯತೆ ಅರ್ಹತೆಗಳಿರಬೇಕಾದ್ದು ಅತ್ಯಗತ್ಯ ಇಲ್ಲದಿದ್ದಲ್ಲಿ ನಿಮ್ಮ ಈ ಕ್ರಮವು ನಿಷ್ಫಲವಾಗಿ ಕೊನೆಯಲ್ಲಿ ನಿಮಗೆ ನಿರಾಶೆಯಾಗುವುದು ಸಹಜವಾಗಿದೆ.

ಸತ್ಯಾಗ್ರಹಿಯು ಶಂಕೆಯನ್ನೂ, ಭಯ ಭೀತಿಯನ್ನು ಬಿಡುವುದು ಅಗತ್ಯ. ಯಾವ ಭೀತಿಯೂ ಇಲ್ಲದೆ ಪ್ರತಿಸ್ಪರ್ಧಿಯನ್ನು ಸಂಪೂರ್ಣವಾಗಿ ನಂಬುವ ಮನೋಸ್ಥೈರ್ಯ ಸತ್ಯಾಗ್ರಹಿಗಿರಬೇಕಾದುದ್ದು ಅಗತ್ಯ ತನ್ನ ಪ್ರತಿಸ್ಪರ್ಧಿಯು ಇಪ್ಪತ್ತು ಸಲ ಸುಳ್ಳು ಹೇಳಿದರೂ ಸತ್ಯಾಗ್ರಹಿಯು ಆತನಲ್ಲಿರುವ ತನ್ನ ನಂಬಿಕೆಯನ್ನು ಬಿಟ್ಟು ಕೊಡಬಾರದು ಏಕೆಂದರೆ ಮನುಷ್ಯ ಸ್ವಭಾವದಲ್ಲಿ ಅಚಲ ನಂಬಿಕೆಯನ್ನು ಇಟ್ಟುಕೊಳ್ಳುವುದೇ ಸತ್ಯಾಗ್ರಹದ ಸತ್ವವಾಗಿದೆ.

ವ್ಯಕ್ತಿಗಳಿಗೆ, ಅದರಲ್ಲೂ ಕೆಲವೊಂದು ಸಂದರ್ಭಗಳಲ್ಲಿ ಮಾತ್ರ ಅಹಿಂಸೆಯನ್ನು ಬೋಧಿಸಬಹುದು ಆದರೆ ಸಾರ್ವಜನಿಕರಿಗೆ ಸಾಮೂಹಿಕವಾಗಿ ಅಹಿಂಸೆಯನ್ನು ಬೋಧ್ಧಿಸಲು ಸಾಧ್ಯವಿಲ್ಲವೆಂದು ಅನೇಕರು ಭಾವಿಸಿದ್ದಾರೆ.

ನನ್ನ ಅಭಿಪ್ರಾಯದಲ್ಲಿ ಇದು ಒಂದು ತಪ್ಪು ಭಾವನೆ ಆಗಿದೆ ಮಾನವ ಕುಲವು ಅಹಿಂಸೆಯನ್ನು ರೂಢಿ ಮಾಡಿಕೊಳ್ಳದಿದ್ದಲ್ಲಿ ಅಳು ಎಂದೋ ನಿರ್ನಾಮವಾಗಿ ಹೋಗುತ್ತಿತ್ತು ಆದರೆ ಅಹಿಂಸೆಯ ಮತ್ತು ಹಿಂಸೆಯ ಬಲಾಬಲದ ಬಗ್ಗೆ ವಾದವಿವಾದ ನಡೆದಾಗಲೆಲ್ಲ ಅಹಿಂಸೆಗೆ ಜಯದೊರೆತಿರುವುದು ವಿದಿತವಾಗಿದೆ.

SHAKTI
SUDHA

A Superb Tonic

ಭಾರತದಲ್ಲಿ ಗೋವಧೆ
ಪೂರ್ಣ ನಿಶ್ಶೇಧವಾಗಲಿ



Protect the Cow

Quality Printing Neat Binding

Lakshminarasimha Press

Sivarampet, Mysore 1

Help The Gorakshana

—HumanitarianPropoganda Monthly—

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore